# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (1435)1233 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇರುವ ಖಾಸಗಿ ಕ್ಲಿನಿಕ್‌ಗಳು, ಖಾಸಗಿ ಆಸ್ಪತ್ರೆಗಳು, ಖಾಸಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಖಾಸಗಿ ಆಸ್ಪತ್ರೆಗಳನ್ನು ಅಥವಾ ಕ್ಲಿನಿಕ್‌ಗಳನ್ನು ತೆರೆಯಲು ಇರುವ ನಿಬಂಧನೆಗಳು ಏನು; | ರಾಜ್ಯದಲ್ಲಿ ಈವರೆಗೂ ಕೆಪಿಎಂಇ ಕಾಯ್ದೆಯಡಿ ಆನ್‌ಲೈನ್ ಮುಖಾಂತರ ನೋಂದಣಿಗೊಂಡ ಖಾಸಗಿ ವೈದ್ಯಕೀಯ ಸಂಸ್ಥೆಗಳ ಒಟ್ಟು ಸಂಖ್ಯೆ: 32,527.<br><br>ಪ್ರವರ್ಗವಾರು ಖಾಸಗಿ ವೈದ್ಯಕೀಯ ಸಂಸ್ಥೆಗಳ ಮಾಹಿತಿಯನ್ನು **ಅನುಬಂಧ – 1 ರಲ್ಲಿ** ನೀಡಲಾಗಿದೆ.<br><br>ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಪ್ರಾರಂಭಿಸಲು ಕೆ.ಪಿ.ಎಂ.ಇ ತಿದ್ದುಪಡಿ ಅಧಿನಿಯಮ 2017 ಸೆಕ್ಷನ್ 5 ರಂತೆ, ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಿ, ನಿಯಾಮಾನುಸಾರ ನೋಂದಣಿ ಪಡೆಯುವುದು ಅವಶ್ಯಕವಾಗಿರುತ್ತದೆ.<br><br>ಕಾಯ್ದೆಯ ಪ್ರತಿಯನ್ನು **ಅನುಬಂಧ – 2ರಲ್ಲಿ** ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಖಾಸಗಿ ಕ್ಲಿನಿಕ್, ಆಸ್ಪತ್ರೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ನಿಯಂತ್ರಣವಿಲ್ಲದ ಶುಲ್ಕವನ್ನು ರೋಗಿಗಳಿಂದ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವುಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; | ಬಂದಿದೆ.<br><br>ರೋಗಿಗಳಿಂದ ಹೆಚ್ಚಿನ ಹಣ ಪಡೆಯುವುದಕ್ಕೆ ಕಡಿವಾಣ ಹಾಕಲು ಕೆಪಿಎಂಇ ತಿದ್ದುಪಡಿ ಅಧಿನಿಯಮ 2017 ಕಲಂ 10 (1) ರಂತೆ, ಎಲ್ಲಾ ಖಾಸಗಿ ವೈದ್ಯಕೀಯ ಸಂಸ್ಥೆಗಳು ರೋಗಿಗೆ ವಿಧಿಸುವ ದರ ಪಟ್ಟಿಯನ್ನು ಸಂಸ್ಥೆಯ ಸ್ವಂತದ ಯಾವುದಾದರೂ ಜಾಲತಾಣವಿದ್ದಲ್ಲಿ, ಅದರಲ್ಲಿ ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು.<br><br>ಸ್ವಾಗತ ಕೋಣೆಯನ್ನು ಎದ್ದುಕಾಣುವ ಸ್ಥಳದಲ್ಲಿ ಇರುವ ಸಂಸ್ಥೆಯ ಸೂಚನಾ ಫಲಕದಲ್ಲಿ ಸಮಾಲೋಚನಾ ಶುಲ್ಕವನ್ನು, ಪ್ರಮುಖ ಮತ್ತು ಬಹುತೇಕವಾಗಿ ಬಳಸಲಾಗುವ ತಪಾಸಣೆಗಳ, ಚಿಕಿತ್ಸೆಗಳ ವಿಧಾನಗಳ ಮತ್ತು ಇತರ ಸೇವೆಗಳ ದರಗಳನ್ನು ಹಾಗೂ ಆಸ್ಪತ್ರೆ ಚಾರ್ಜುಗಳನ್ನು ಪ್ರದರ್ಶಿಸುವುದು ಹಾಗೂ |

| | | |
|---|---|---|
| | | ದರಪಟ್ಟಿಯಲ್ಲಿ ನಿಗದಿಪಡಿಸಿದ ಹಣವನ್ನು ಮಾತ್ರ ರೋಗಿಯು ಪಾವತಿಸಬೇಕಾಗಿರುತ್ತದೆ.<br><br>ಒಂದು ವೇಳೆ ಖಾಸಗಿ ವೈದ್ಯಕೀಯ ಸಂಸ್ಥೆಗಳು ರೋಗಿಗಳಿಗೆ ಹೆಚ್ಚಿನ ದರ ವಿಧಿಸಿದ್ದಲ್ಲಿ, ಕೆ.ಪಿ.ಎಂ.ಇ (ತಿದ್ದುಪಡಿ) ಅಧಿನಿಯಮ 2017 ಸೆಕ್ಷನ್ 15 ಉಪಬಂಧ 2 ರಂತೆ ಕ್ರಮ ಕೈಗೊಳ್ಳಲಾಗುವುದು.<br><br>ಕಾಯ್ದೆಯ ಪ್ರತಿಯನ್ನು **ಅನುಬಂಧ – 3ರಲ್ಲಿ** ನೀಡಲಾಗಿದೆ. |
| ಇ) | ರಾಜ್ಯದಲ್ಲಿರುವ ಖಾಸಗಿ ಕ್ಲಿನಿಕ್ ಮತ್ತು ಖಾಸಗಿ ಆಸ್ಪತ್ರೆಗಳು ರೋಗಿಗಳಿಗೆ ನೀಡುವ ಚಿಕಿತ್ಸೆಯ ಸಂಬಂಧ ಶುಲ್ಕವನ್ನು (Fee) ನಿಗದಿಪಡಿಸಲು ಯಾವ ಮಾನದಂಡದ ಆಧಾರದ ಮೇಲೆ ನಿಗದಿಗೊಳಿಸಲಾಗಿರುತ್ತದೆ; ನಿಗದಿಗೊಳಿಸದೇ ಇದ್ದಲ್ಲಿ, ಇದಕ್ಕೆ ಕಾರಣಗಳೇನು; | ರಾಜ್ಯ ಸರ್ಕಾರವು, ಸರ್ಕಾರದ ಆರೋಗ್ಯ ಭರವಸೆ ಸ್ಕೀಮುಗಳಿಗೆ ಸಂಬಂಧಿಸಿದಂತೆ ಮಾತ್ರ ದರವನ್ನು ನಿಗದಿಪಡಿಸಿರುತ್ತದೆ.<br><br>ಸದರಿ ಸ್ಕೀಮುಗಳನ್ನು ಹೊರತುಪಡಿಸಿ, ಯಾವುದೇ ದರಗಳನ್ನು ನಿಗದಿಪಡಿಸಲು ಕೆಪಿಎಂಇ ಕಾಯ್ದೆಯಡಿ ಅವಕಾಶವಿರುವುದಿಲ್ಲ.<br><br>ಆದಾಗ್ಯೂ, ರೋಗಿಗಳಿಗೆ ನ್ಯಾಯಸಮ್ಮತ ವ್ಯವಸ್ಥೆಯನ್ನು ಜಾರಿಗೊಳಿಸುವ ಉದ್ದೇಶದಿಂದ, ಖಾಸಗಿ ವೈದ್ಯಕೀಯ ಸಂಸ್ಥೆಗಳು ರೋಗಿಗಳಿಗೆ ಒದಗಿಸುವ ವೈದ್ಯಕೀಯ ಸೇವೆಗಳಿಗೆ ಸಂಬಂಧಿಸಿದಂತೆ, ಕೆಪಿಎಂಇ ತಿದ್ದುಪಡಿ ಅಧಿನಿಯಮ 2017 ಸೆಕ್ಷನ್ 10 ಕಲಂ 6 ರಂತೆ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯನ್ನು ದಾಖಲು ಮಾಡಿಕೊಳ್ಳುವ ಅವಧಿಯಲ್ಲಿ ಅಥವಾ ಚಿಕಿತ್ಸೆಯನ್ನು ಪ್ರಾರಂಭಿಸಿದ ನಂತರ, ರೋಗಿಗೆ ಅಥವಾ ರೋಗಿಯ ಸಂಗಡಿಗನಿಗೆ, ಚಿಕಿತ್ಸೆಗಾಗಿ ತಗಲುವ ವೆಚ್ಚದ ಸೂಕ್ತ ಅಂದಾಜನ್ನು ಮತ್ತು ಚಾರ್ಜುಗಳನ್ನು ಒದಗಿಸತಕ್ಕದ್ದು ಹಾಗೂ ಅಂತಿಮ ಬಿಲ್ಲು ಅಂದಾಜು ವೆಚ್ಚವನ್ನು ಮೀರತಕ್ಕದ್ದಲ್ಲ ಎಂಬ ನಿಯಮವನ್ನು ಜಾರಿಗೊಳಿಸಲಾಗಿದೆ.<br><br>ಕಾಯ್ದೆಯ ಪ್ರತಿಯನ್ನು **ಅನುಬಂಧ – 4ರಲ್ಲಿ** ನೀಡಲಾಗಿದೆ. |
| ಈ) | ರಾಜ್ಯದಲ್ಲಿರುವ ಖಾಸಗಿ ಆಸ್ಪತ್ರೆಗಳಿಗೆ ರೋಗಿಗಳ ಸಂಬಂಧ ಮತ್ತು ಚಿಕಿತ್ಸೆಯ ಸಂಬಂಧ ಏಕ ರೀತಿಯ ಶುಲ್ಕವನ್ನು ನಿಗದಿಪಡಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಅದನ್ನು ಯಾವಾಗ ಜಾರಿಗೊಳಿಸಲಾಗುವುದು; ಇಲ್ಲದೇ ಇದ್ದಲ್ಲಿ, ಈ ಸಂಬಂಧ ಸರ್ಕಾರ ಯಾವ ಕ್ರಮಗಳನ್ನು | ರಾಜ್ಯದಲ್ಲಿರುವ ಖಾಸಗಿ ಆಸ್ಪತ್ರೆಗಳಿಗೆ ಏಕ ರೀತಿಯ ಶುಲ್ಕವನ್ನು ನಿಗದಿಪಡಿಸುವ ಉದ್ದೇಶವನ್ನು ಸರ್ಕಾರ ಹೊಂದಿರುತ್ತದೆ.<br><br>ಮುಂಬರುವ ದಿನಗಳಲ್ಲಿ ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | ಕೈಗೊಳ್ಳುವುದು: | |
| ಊ) | ರಾಜ್ಯದಲ್ಲಿ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಿದಾಗ, ಯಾವ ರೀತಿಯ ಪರಿಹಾರ ರೋಗಿಗಳಿಗೆ ಸಿಗುತ್ತದೆ; ಸರ್ಕಾರದ ವತಿಯಿಂದ ಯಾವುದೇ ರೀತಿಯ ದೂರು ಪ್ರಾಧಿಕಾರಗಳನ್ನು ರಚಿಸಲಾಗಿದೆಯೇ; | ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಕಾನೂನಿನ ಮೂಲಕ ನಿಯಂತ್ರಿಸುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲು ಕೆ.ಪಿ.ಎಂ.ಇ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರವನ್ನು ರಚಿಸಲಾಗಿದೆ.<br><br>ಸದರಿ ಪ್ರಾಧಿಕಾರವು, ರೋಗಿಗಳಿಂದ ಹೆಚ್ಚಿನ ದರ ಪಡೆಯುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿರುದ್ಧ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ 2017 ಸೆಕ್ಷನ್ 15 ಉಪಬಂಧ 2 ರಂತೆ ಕ್ರಮ ಕೈಗೊಳ್ಳುತ್ತದೆ.<br><br>ಪ್ರಾಧಿಕಾರದ ಮಾಹಿತಿಯನ್ನು **ಅನುಬಂಧ-05ರಲ್ಲಿ** ನೀಡಲಾಗಿದೆ. |
| ಊಾ) | ರಚಿಸಲಾಗಿದ್ದಲ್ಲಿ, ಇಲ್ಲಿಯವರೆಗೆ ದಾಖಲಾಗಿರುವ ದೂರುಗಳು ಎಷ್ಟು ಮತ್ತು ದೂರು ಸಂಬಂಧ ಎಷ್ಟು ರೋಗಿಗಳಿಗೆ ಪರಿಹಾರ ದೊರಕಿರುತ್ತದೆ? (ವಿವರಗಳನ್ನು ಒದಗಿಸುವುದು) | ಬೆಂಗಳೂರು ನಗರದಲ್ಲಿ 13 ಪ್ರಕರಣಗಳು ದಾಖಲಾಗಿ ಎಲ್ಲಾ ಪ್ರಕರಣಗಳಲ್ಲೂ ಪರಿಹಾರ ನೀಡಿ, ವಿಲೇವಾರಿ ಮಾಡಲಾಗಿದೆ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 2 ಪ್ರಕರಣಗಳು ದಾಖಲಾಗಿದ್ದು ವಿಚಾರಣೆ ಹಂತದಲ್ಲಿರುತ್ತದೆ.<br><br>ಮಾಹಿತಿಯನ್ನು **ಅನುಬಂಧ-06 ರಲ್ಲಿ** ನೀಡಲಾಗಿದೆ. |

**ಸಂಖ್ಯೆ: ಆಕುಕ 16 ಎಸ್.ಟಿ.ಕ್ಯೂ. 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ - 1

## Category wise details of private medical establishments registered under the KPME online portal

| Sl No. | District Name | Allied Health Professionals Centre | AYUSH Therapy Centre | Blood Bank | Clinic/Polyclinic only Consultation | Clinic/Polyclinic with Diagnostic | Clinic/Polyclinic with Dispensary | Clinic/Polyclinic with observation | Dental Lab or Clinic | Diagnostic centre/Imaging Centre | Health Check up Centre | Hospital (Level 1A) | Hospital (Level 1B) | Hospital (Level 2) | Hospital (Level 3)(Non-Teaching) | Hospital (Level 4)(Teaching) | Integrated Counselling Centre | Medical Diagnostic Laboratory | Speciality/Super Speciality | Grand Total |
|---|---|---|---|---|---|---|---|---|---|---|---|---|---|---|---|---|---|---|---|---|
| 1 | Bagalkot | 0 | 17 | 5 | 329 | 33 | 84 | 55 | 50 | 32 | 2 | 85 | 29 | 133 | 25 | 19 | 0 | 78 | 8 | 984 |
| 2 | Ballari | 9 | 2 | 3 | 125 | 32 | 42 | 61 | 44 | 17 | 0 | 9 | 9 | 77 | 12 | 3 | 1 | 74 | 9 | 529 |
| 3 | Belagavi | 10 | 64 | 1 | 851 | 68 | 192 | 123 | 120 | 70 | 0 | 116 | 118 | 243 | 36 | 30 | 6 | 135 | 20 | 2203 |
| 4 | Bengaluru Rural | 3 | 3 | 1 | 185 | 37 | 41 | 50 | 26 | 13 | 0 | 29 | 31 | 47 | 14 | 9 | 1 | 44 | 4 | 538 |
| 5 | Bengaluru Urban | 94 | 177 | 9 | 2320 | 1432 | 565 | 1117 | 1268 | 183 | 9 | 535 | 235 | 701 | 151 | 32 | 3 | 543 | 99 | 9473 |
| 6 | Bidar | 0 | 3 | 0 | 129 | 12 | 12 | 60 | 20 | 29 | 0 | 36 | 41 | 43 | 6 | 10 | 0 | 19 | 39 | 459 |
| 7 | Chamarajanagar | 0 | 1 | 0 | 49 | 11 | 15 | 7 | 7 | 8 | 1 | 9 | 3 | 8 | 0 | 0 | 0 | 8 | 1 | 128 |
| 8 | Chikkaballapura | 1 | 2 | 1 | 96 | 31 | 27 | 29 | 26 | 11 | 0 | 21 | 14 | 28 | 4 | 1 | 0 | 53 | 0 | 345 |
| 9 | Chikkamagaluru | 3 | 18 | 0 | 135 | 40 | 67 | 29 | 54 | 11 | 2 | 22 | 6 | 27 | 3 | 1 | 0 | 47 | 2 | 467 |
| 10 | Chitradurga | 2 | 9 | 1 | 178 | 52 | 14 | 8 | 14 | 15 | 0 | 69 | 13 | 4 | 4 | 11 | 0 | 20 | 2 | 416 |
| 11 | Dakshina Kannada | 18 | 41 | 3 | 545 | 145 | 788 | 58 | 367 | 37 | 10 | 56 | 20 | 42 | 12 | 19 | 0 | 216 | 20 | 2397 |
| 12 | Davanagere | 4 | 16 | 5 | 235 | 106 | 79 | 33 | 96 | 25 | 0 | 20 | 27 | 50 | 15 | 3 | 0 | 66 | 3 | 783 |
| 13 | Dharwad | 4 | 32 | 8 | 538 | 133 | 95 | 68 | 128 | 26 | 2 | 12 | 36 | 58 | 30 | 12 | 0 | 87 | 4 | 1273 |
| 14 | Gadag | 1 | 2 | 2 | 163 | 12 | 25 | 28 | 14 | 13 | 0 | 32 | 14 | 20 | 11 | 10 | 0 | 31 | 1 | 379 |
| 15 | Hassan | 1 | 7 | 3 | 191 | 57 | 19 | 31 | 47 | 20 | 0 | 6 | 14 | 32 | 12 | 2 | 0 | 39 | 5 | 486 |
| 16 | Haveri | 0 | 2 | 0 | 67 | 13 | 237 | 44 | 20 | 12 | 6 | 43 | 20 | 46 | 13 | 1 | 0 | 48 | 1 | 573 |
| 17 | Kalaburagi | 3 | 8 | 5 | 568 | 38 | 67 | 68 | 76 | 60 | 0 | 81 | 147 | 117 | 22 | 16 | 0 | 101 | 5 | 1382 |
| 18 | Kodagu | 9 | 12 | 0 | 60 | 46 | 54 | 17 | 40 | 9 | 0 | 2 | 2 | 19 | 0 | 1 | 0 | 25 | 0 | 296 |
| 19 | Kolar | 11 | 10 | 1 | 121 | 63 | 56 | 55 | 49 | 10 | 1 | 27 | 11 | 75 | 1 | 4 | 1 | 67 | 2 | 565 |
| 20 | Koppal | 2 | 4 | 1 | 60 | 8 | 6 | 12 | 13 | 8 | 30 | 21 | 27 | 26 | 4 | 8 | 0 | 23 | 0 | 253 |
| 21 | Mandya | 0 | 7 | 1 | 277 | 47 | 32 | 13 | 43 | 20 | 0 | 25 | 6 | 21 | 7 | 5 | 0 | 56 | 4 | 564 |
| 22 | Mysuru | 13 | 42 | 2 | 633 | 140 | 132 | 104 | 172 | 45 | 5 | 61 | 111 | 55 | 28 | 17 | 2 | 147 | 3 | 1712 |
| 23 | Raichur | 0 | 6 | 2 | 171 | 14 | 14 | 26 | 21 | 15 | 0 | 47 | 40 | 69 | 18 | 6 | 0 | 23 | 6 | 478 |
| 24 | Ramanagara | 2 | 3 | 2 | 118 | 30 | 27 | 54 | 24 | 12 | 2 | 25 | 6 | 33 | 5 | 3 | 0 | 33 | 0 | 379 |
| 25 | Shivamogga | 3 | 25 | 8 | 249 | 58 | 120 | 28 | 62 | 15 | 2 | 69 | 12 | 50 | 10 | 4 | 0 | 59 | 17 | 791 |
| 26 | Tumakuru | 0 | 2 | 4 | 198 | 101 | 66 | 21 | 42 | 20 | 11 | 15 | 8 | 139 | 11 | 5 | 0 | 79 | 7 | 729 |
| 27 | Udupi | 8 | 29 | 1 | 202 | 60 | 529 | 23 | 155 | 23 | 4 | 18 | 12 | 29 | 7 | 6 | 0 | 145 | 9 | 1260 |
| 28 | Uttara Kannada | 3 | 10 | 1 | 106 | 31 | 205 | 28 | 83 | 13 | 1 | 26 | 27 | 35 | 1 | 2 | 0 | 57 | 4 | 633 |
| 29 | Vijayanagara | 2 | 5 | 2 | 110 | 33 | 36 | 64 | 24 | 17 | 0 | 32 | 23 | 51 | 4 | 5 | 0 | 46 | 4 | 458 |
| 30 | Vijayapura | 1 | 6 | 4 | 483 | 30 | 120 | 63 | 74 | 41 | 0 | 50 | 125 | 113 | 5 | 11 | 0 | 84 | 12 | 1222 |
| 31 | Yadgir | 0 | 3 | 0 | 144 | 6 | 11 | 29 | 6 | 17 | 0 | 39 | 57 | 4 | 0 | 7 | 0 | 48 | 1 | 372 |
| | Grand Total | 207 | 568 | 78 | 9636 | 2919 | 3777 | 2406 | 3185 | 847 | 88 | 1636 | 1244 | 2895 | 471 | 263 | 14 | 2501 | 292 | 32527 |

<u>ಕೆ.ಪಿ.ಎಂ.ಇ ಕಾಯ್ದೆಯ ವಿವರ:</u>

**5. ನೋಂದಣಿಗಾಗಿ ಅರ್ಜಿ.-** (1) ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರೆಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ, ಹಾಗೂ ಅಂಥ ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

**10. ಅಧಿಸೂಚಿಸಬೇಕಾದ ಚಾರ್ಜುಗಳ ಅನುಸೂಚಿ ಮತ್ತು ಸಂಸ್ಥೆಯ ವಿವರಗಳು.-**

(1) ರೋಗಿಗಳ ಮತ್ತು ಸಾರ್ವಜನಿಕರ ಮಾಹಿತಿಗಾಗಿ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಮಾಲೋಚನಾ ಶುಲ್ಕ, ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಚಿಕಿತ್ಸಾ ವಿಧಾನ, ಆಸ್ಪತ್ರೆ ಚಾರ್ಜುಗಳು ಮತ್ತು ಇತರ ಸೇವೆಗಳಿಗೆ ಸಂಬಂಧಿಸಿದ ಚಾರ್ಜುಗಳ ಅನುಸೂಚಿಯನ್ನು ಹಾಗೂ ನಿಯಮಿಸಬಹುದಾದಂತೆ ಸಂಸ್ಥೆಯ ವಿವರಗಳನ್ನು ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಪ್ರತಿಯೊಂದು ವಿಧಾನದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಲಭ್ಯವಾಗುವಂತೆ ಮಾಡತಕ್ಕದ್ದು, ಎಂದರೆ:-

ಸರ್ಕಾರವು ಒದಗಿಸುವ ಸಾರ್ವಜನಿಕ ಜಾಲತಾಣದಲ್ಲಿ ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸಂಸ್ಥೆಯ ಸ್ವಂತದ ಯಾವುದಾದರೂ ಜಾಲತಾಣವಿದ್ದಲ್ಲಿ, ಅದರಲ್ಲಿ, ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸ್ವಾಗತ ಕೋಣೆಯನ್ನು ಎದ್ದುಕಾಣುವ ಸ್ಥಳದಲ್ಲಿ ಇರುವ ಸಂಸ್ಥೆಯ ಸೂಚನಾ ಫಲಕದಲ್ಲಿ ಸಮಾಲೋಚನಾ ಶುಲ್ಕವನ್ನು, ಪ್ರಮುಖ ಮತ್ತು ಬಹುತೇಕವಾಗಿ ಬಳಸಲಾಗುವ ತಪಾಸಣೆಗಳ, ಚಿಕಿತ್ಸೆ, ಚಿಕಿತ್ಸೆಗಳ ವಿಧಾನಗಳ, ಚಿಕಿತ್ಸೆಗಳ ಮತ್ತು ಇತರ ಸೇವೆಗಳ ದರಗಳನ್ನು ಹಾಗೂ ಆಸ್ಪತ್ರೆ ಚಾರ್ಜುಗಳನ್ನು ಪ್ರದರ್ಶಿಸುವುದು;

(6) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯನ್ನು ದಾಖಲು ಮಾಡಿಕೊಳ್ಳುವ ಅವಧಿಯಲ್ಲಿ ಅಥವಾ ಚಿಕಿತ್ಸೆಯನ್ನು ಪ್ರಾರಂಭಿಸಿದ ನಂತರ, ರೋಗಿಗೆ ಅಥವಾ ರೋಗಿಯ ಸಂಗಡಿಗನಿಗೆ, ಚಿಕಿತ್ಸೆಗಾಗಿ ತಗಲುವ ವೆಚ್ಚದ ಸೂಕ್ತ ಅಂದಾಜನ್ನು ಮತ್ತು ಚಾರ್ಜುಗಳನ್ನು ಒದಗಿಸತಕ್ಕದ್ದು ಹಾಗೂ ಅಂತಿಮ ಬಿಲ್ಲು ಅಂದಾಜು ವೆಚ್ಚವನ್ನು ಮೀರತಕ್ಕದ್ದಲ್ಲ.

**15. ಜುಲ್ಮಾನೆ ಅಥವಾ ನೋಂದಣಿಯ ಅಮಾನತು ಅಥವಾ ರದ್ದತಿ.-** (2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಿಸಿದಂತೆ ರೋಗಿಯು ಮಾಡಿದ ದೂರನ್ನು 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮ ಮಾಡತಕ್ಕದ್ದು:

**ಕೆ.ಪಿ.ಎಂ.ಇ ಕಾಯ್ದೆಯ ವಿವರ:**

**5. ನೋಂದಣಿಗಾಗಿ ಅರ್ಜಿ.-** (1) ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರೆಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಬೇರ ಬೇರ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರ ಬೇರ ಶುಲ್ಕವನ್ನು ನಿಯಮಿಸಬಹುದು.

**10. ಅಧಿಸೂಚಿಸಬೇಕಾದ ಚಾರ್ಜುಗಳ ಅನುಸೂಚಿ ಮತ್ತು ಸಂಸ್ಥೆಯ ವಿವರಗಳು.-**

(1) ರೋಗಿಗಳ ಮತ್ತು ಸಾರ್ವಜನಿಕರ ಮಾಹಿತಿಗಾಗಿ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಮಾಲೋಚನಾ ಶುಲ್ಕ, ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಚಿಕಿತ್ಸಾ ವಿಧಾನ, ಆಸ್ಪತ್ರೆ ಚಾರ್ಜುಗಳು ಮತ್ತು ಇತರ ಸೇವೆಗಳಿಗೆ ಸಂಬಂಧಿಸಿದ ಚಾರ್ಜುಗಳ ಅನುಸೂಚಿಯನ್ನು ಹಾಗೂ ನಿಯಮಿಸಬಹುದಾದಂತೆ ಸಂಸ್ಥೆಯ ವಿವರಗಳನ್ನು ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಪ್ರತಿಯೊಂದು ವಿಧಾನದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಲಭ್ಯವಾಗುವಂತೆ ಮಾಡತಕ್ಕದ್ದು, ಎಂದರೆ:-

ಸರ್ಕಾರವು ಒದಗಿಸುವ ಸಾರ್ವಜನಿಕ ಜಾಲತಾಣದಲ್ಲಿ ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸಂಸ್ಥೆಯ ಸ್ವಂತದ ಯಾವುದಾದರೂ ಜಾಲತಾಣವಿದ್ದಲ್ಲಿ, ಅದರಲ್ಲಿ, ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸ್ವಾಗತ ಕೋಣೆಯನ್ನು ಎದ್ದುಕಾಣುವ ಸ್ಥಳದಲ್ಲಿ ಇರುವ ಸಂಸ್ಥೆಯ ಸೂಚನಾ ಫಲಕದಲ್ಲಿ ಸಮಾಲೋಚನಾ ಶುಲ್ಕವನ್ನು, ಪ್ರಮುಖ ಮತ್ತು ಬಹುತೇಕವಾಗಿ ಬಳಸಲಾಗುವ ತಪಾಸಣೆಗಳ, ಚಿಕಿತ್ಸೆ, ಚಿಕಿತ್ಸೆಗಳ ವಿಧಾನಗಳ, ಚಿಕಿತ್ಸೆಗಳ ಮತ್ತು ಇತರ ಸೇವೆಗಳ ದರಗಳನ್ನು ಹಾಗೂ ಆಸ್ಪತ್ರೆ ಚಾರ್ಜುಗಳನ್ನು ಪ್ರದರ್ಶಿಸುವುದು;

(6) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯನ್ನು ದಾಖಲು ಮಾಡಿಕೊಳ್ಳುವ ಅವಧಿಯಲ್ಲಿ ಅಥವಾ ಚಿಕಿತ್ಸೆಯನ್ನು ಪ್ರಾರಂಭಿಸಿದ ನಂತರ, ರೋಗಿಗೆ ಅಥವಾ ರೋಗಿಯ ಸಂಗಡಿಗನಿಗೆ, ಚಿಕಿತ್ಸೆಗಾಗಿ ತಗಲುವ ವೆಚ್ಚದ ಸೂಕ್ತ ಅಂದಾಜನ್ನು ಮತ್ತು ಚಾರ್ಜುಗಳನ್ನು ಒದಗಿಸತಕ್ಕದ್ದು ಹಾಗೂ ಅಂತಿಮ ಬಿಲ್ಲು, ಅಂದಾಜು ವೆಚ್ಚವನ್ನು ಮೀರತಕ್ಕದ್ದಲ್ಲ.

**15. ಜುಲ್ಮಾನೆ ಅಥವಾ ನೋಂದಣಿಯ ಅಮಾನತು ಅಥವಾ ರದ್ದತಿ.-** (2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಸಿದಂತೆ ರೋಗಿಯು ಮಾಡಿದ ದೂರನ್ನು 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

**ಕೆ.ಪಿ.ಎಂ.ಇ ಕಾಯ್ದೆಯ ವಿವರ:**

**5. ನೋಂದಣಿಗಾಗಿ ಅರ್ಜಿ.-** (1) ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ, ಹಾಗೂ ಅಂಥ ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಮತ್ತು ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

**10. ಅಧಿಸೂಚಿಸಬೇಕಾದ ಚಾರ್ಜುಗಳ ಅನುಸೂಚಿ ಮತ್ತು ಸಂಸ್ಥೆಯ ವಿವರಗಳು.-**

(1) ರೋಗಿಗಳ ಮತ್ತು ಸಾರ್ವಜನಿಕರ ಮಾಹಿತಿಗಾಗಿ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಮಾಲೋಚನಾ ಶುಲ್ಕ, ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಚಿಕಿತ್ಸಾ ವಿಧಾನ, ಆಸ್ಪತ್ರೆ ಚಾರ್ಜುಗಳು ಮತ್ತು ಇತರ ಸೇವೆಗಳಿಗೆ ಸಂಬಂಧಿಸಿದ ಚಾರ್ಜುಗಳ ಅನುಸೂಚಿಯನ್ನು ಹಾಗೂ ನಿಯಮಿಸಬಹುದಾದಂತೆ ಸಂಸ್ಥೆಯ ವಿವರಗಳನ್ನು ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಪ್ರತಿಯೊಂದು ವಿಧಾನದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಲಭ್ಯವಾಗುವಂತೆ ಮಾಡತಕ್ಕದ್ದು, ಎಂದರೆ:-

ಸರ್ಕಾರವು ಒದಗಿಸುವ ಸಾರ್ವಜನಿಕ ಜಾಲತಾಣದಲ್ಲಿ ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸಂಸ್ಥೆಯ ಸ್ವಂತದ ಯಾವುದಾದರೂ ಜಾಲತಾಣವಿದ್ದಲ್ಲಿ, ಅದರಲ್ಲಿ, ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸ್ವಾಗತ ಕೋಣೆಯನ್ನು ಎದ್ದುಕಾಣುವ ಸ್ಥಳದಲ್ಲಿ ಇರುವ ಸಂಸ್ಥೆಯ ಸೂಚನಾ ಫಲಕದಲ್ಲಿ ಸಮಾಲೋಚನಾ ಶುಲ್ಕವನ್ನು, ಪ್ರಮುಖ ಮತ್ತು ಬಹುತೇಕವಾಗಿ ಬಳಸಲಾಗುವ ತಪಾಸಣೆಗಳ, ಚಿಕಿತ್ಸೆ, ಚಿಕಿತ್ಸೆಗಳ ವಿಧಾನಗಳ, ಚಿಕಿತ್ಸೆಗಳ ಮತ್ತು ಇತರ ಸೇವೆಗಳ ದರಗಳನ್ನು ಹಾಗೂ ಆಸ್ಪತ್ರೆ ಚಾರ್ಜುಗಳನ್ನು ಪ್ರದರ್ಶಿಸುವುದು;

(6) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯನ್ನು ದಾಖಲು ಮಾಡಿಕೊಳ್ಳುವ ಅವಧಿಯಲ್ಲಿ ಅಥವಾ ಚಿಕಿತ್ಸೆಯನ್ನು ಪ್ರಾರಂಭಿಸಿದ ನಂತರ, ರೋಗಿಗೆ ಅಥವಾ ರೋಗಿಯ ಸಂಗಡಿಗನಿಗೆ, ಚಿಕಿತ್ಸೆಗಾಗಿ ತಗಲುವ ವೆಚ್ಚದ ಸೂಕ್ತ ಅಂದಾಜನ್ನು ಮತ್ತು ಚಾರ್ಜುಗಳನ್ನು ಒದಗಿಸತಕ್ಕದ್ದು ಹಾಗೂ ಅಂತಿಮ ಬಿಲ್ಲು ಅಂದಾಜು ವೆಚ್ಚವನ್ನು ಮೀರತಕ್ಕದ್ದಲ್ಲ.

**15. ಜುಲ್ಮಾನೆ ಅಥವಾ ನೋಂದಣಿಯ ಅಮಾನತು ಅಥವಾ ರದ್ದತಿ.-** (2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಿಸಿದಂತೆ ರೋಗಿಯು ಮಾಡಿದ ದೂರನ್ನು 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

**4. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ.-** ಪ್ರತಿಯೊಂದು ಜಿಲ್ಲೆಯಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಮತ್ತು ಅಂಥ ಅರ್ಹತೆಯನ್ನು ಹೊಂದಿರುವ, ಈ ಮುಂದಿನ ನಾಮ ನಿರ್ದೇಶಿತ ಸದಸ್ಯರನ್ನು ಒಳಗೊಂಡ ಒಂದು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಇರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ಬಿ) | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| (ಸಿ) | ಜಿಲ್ಲಾ ಆಯುಷ್ ಅಧಿಕಾರಿ | ಸದಸ್ಯರು |
| (ಡಿ) | ಭಾರತೀಯ ವೈದ್ಯಕೀಯ ಸಂಘದಿಂದ ಮತ್ತು ಇನ್ನೊಂದು ಇತರ ಸಂಘದಿಂದ ಪ್ರತಿಯೊಂದರಿಂದಲೂ ಒಬ್ಬೊಬ್ಬ ಸದಸ್ಯರು | ಸದಸ್ಯರು |
| (ಇ) | ಪ್ರಾಧಿಕಾರವು ಕುಂದುಕೊರತೆ ನಿವಾರಣಾ ಕಾರ್ಯವನ್ನು ನಿರ್ವಹಿಸುವಾಗ ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು |

| ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆಯ ಖಾಸಗಿ ಆಸ್ಪತ್ರೆಗಳ ಚಿಕಿತ್ಸೆ/ಪರೀಕ್ಷೆಗಳಲ್ಲಿ ಹೆಚ್ಚುವರಿಯಾಗಿ ಪಡೆದಿರುವ ಮೊತ್ತದ ವಿವರ. | | | | | |
|---|---|---|---|---|---|
| ಕ್ರ ಸಂಖ್ಯೆ | ದೂರುದಾರರ ಹೆಸರು | ಆಸ್ಪತ್ರೆ/ಕ್ಲಿನಿಕ್ ನ ಹೆಸರು ಮತ್ತು ವಿಳಾಸ | ವಿಷಯ | ತೆಗೆದುಕೊಂಡ ಕ್ರಮ | |
| 1 | ಸಿ.ಕೃಷ್ಣಪ್ಪ, ಸಂಕದಕಟ್ಟೆ, ಹೊಯ್ಸಳನಗರ, 8ನೇ ಕ್ರಾಸ್, 2ನೇ ಮೈನ್, ಬೆಂಗಳೂರು | Sidvin Hospital Pvt Ltd, No.1031, 20th Main, 5th Block, Rajajinagar, Bengaluru | ಇವರ ಚಿಕಿತ್ಸೆಯಲ್ಲಿ ಸರ್ಕಾರ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚಿನ ದರ ಪಡೆದಿರುವ ಬಗ್ಗೆ | ಶ್ರೀ .ಸಿ.ಕೃಷ್ಣಪ್ಪ ರವರ ಚಿಕಿತ್ಸೆಯಲ್ಲಿ ವಿಧಿಸಿದ ಬಿಲ್ಲಿನಲ್ಲಿ ಶೇ.20% ಹಣವನ್ನು ಹಿಂದಿರುಗಿಸಲು ಸೂಚಿಸಲಾಗಿದೆ | ರೂ.73,530/- |
| 2 | ಶ್ರೀ ಎ.ವಿ. ಗೋವಿಂದರಾಜು (ಪತ್ರಿಕೆ ಸಂಪಾದಕರು) ತುಮಕೂರು ಜಿಲ್ಲೆ ಕುಣಿಗಲ್ ತಾ, ಅಮೃತೂರು ಗ್ರಾಮ 9071134829 | ಫೋರ್ಟಿಸ್ ಹಾಸ್ಪಿಟಲ್, ನಾಗರಬಾವಿ, ಫೋರ್ಟಿಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್, ನಂ 23, 18ಅಡಿ ರಸ್ತೆ, ಗುರುಕೃಪಾ ಲೇಔಟ್, 2ನೇ ಹಂತ ನಾಗರಬಾವಿ ಬೆಂಗಳೂರು-560072 9686096860 ccarebv@fortishealthcare.com | ತಮ್ಮ ಪತ್ನಿಯ ಚಿಕಿತ್ಸೆಯಲ್ಲಿ ಅತೀ ಹೆಚ್ಚಿನ ದರ ಪಡೆದಿರುವ ಬಗ್ಗೆ ದೂರು ನೀಡಿರುತ್ತಾರೆ. | ಪ್ರಕರಣ ಸಂಬಂಧ ವ್ಯತ್ಯಾಸದ ಮೊತ್ತವನ್ನು ಹಿಂದಿರುಗಿಸಲು ಆದೇಶಿಸಿದೆ. | ರೂ.21,100/- |
| 3 | ಶ್ರೀ ರಘುವೀರ್ H/O ಕವಿತಾ ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು, 9481427111 | Manipal Hospital, Brigade Gateway 26, 4, 1st Main Rd, beside Metro, Malleshwaram, Bengaluru, Karnataka 560055 | ಮಗುವಿನ ಚಿಕಿತ್ಸೆಯಲ್ಲಿ ಅತೀ ಹೆಚ್ಚಿನ ದರ ಪಡೆದಿರುವ ಬಗ್ಗೆ ಮತ್ತು ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿ ತನದಿಂದ ನಡೆದುಕೊಂಡಿರುತ್ತಾರೆ ಎಂದು | ರೂ.8 ಲಕ್ಷ (ರೂ.8,00,000/-) ಮರುಪಾವತಿಗೆ ಆದೇಶಿಸಿ ಎಚ್ಚರಿಕೆ ಮತ್ತು ಸೂಕ್ತಕ್ರಮಕ್ಕಾಗಿ ಸೂಚಿಸಿರುತ್ತಾರೆ. | ರೂ.8,00,000/- |
| 4 | Sri Venkatesh J, No.82, Krishnappa Layout, 23rd Cross, Ittamadu, Bengaluru-560085. 8495805496/ 07624846468 | Udhbhava Hospital, No.114, 100 Feet Ring Road, BSK 3rd Stage, Bengaluru-560085, 080-26693032/ 9611122355 | ಕೋವಿಡ್-19 ಚಿಕಿತ್ಸೆಗೆ ಹೆಚ್ಚುವರಿ ಹಣ ಪಡೆದಿರುವ ಬಗ್ಗೆ ದೂರು ನೀಡಿರುವ ಬಗ್ಗೆ | ರೂ.2,23,,300/- ಮರುಪಾವತಿಸಲು ಆದೇಶಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ. | ರೂ.2,23,300/- |
| 5 | ಶ್ರೀ.ವಸಂತ್‌ಕುಮಾರ್ Vasanthkumar.g@hotmail.com | Medstar Speciality Hospital, 641/17, Medstar Speciality Hospital, 1/3, Kodigehalli Main | Lipoma & Papilloma Excision ಚಿಕಿತ್ಸೆಯಲ್ಲಿ ಹೆಚ್ಚುವರಿ ಹಣ ಪಡೆದಿರುವ ಬಗ್ಗೆ. | ರೂ.30,000/- ಹಿಂದಿರುಗಿಸಲು ಆದೇಶಿಸಿದೆ. | ರೂ.30,000/- |

Scanned with OKEN Scanner

| | | | | | |
|---|---|---|---|---|---|
| | | Rd. Sahakar Nagar, Sanjeevini Nagar, Bengaluru, Karnataka 560092 09611935455 info@medstarhospital.in | | | |
| 6 | Ms.Lalitha A Mother of Dhrithi P, No.4, 10th Main, Sampige Layout, Amarjyothinagar, Bengaluru-560079. 9945854578 | A K Clinic Pvt Ltd, No.316, 1st Floor, Above Karur Vysya Bank, 100 Feet Road, Indira Nagar, Bengaluru-560038. 9074400063 | ಕಣ್ಣಿನ ಉಬ್ಬು ಚಿಕಿತ್ಸೆಯ ಹಣವನ್ನು ಹಿಂದಿರುಗಿಸಿಕೊಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. | ರೂ.30,000/- ಗಳನ್ನು ಹಿಂದಿರುಗಿಸಲು ಒಪ್ಪಿರುತ್ತಾರೆ ಒಂದುವಾರದಲ್ಲಿ ಆದೇಶಿಸಿದೆ. | ರೂ.30,000/- |
| 8 | [illegible] ನಂ.3/8, 5ನೇ ಕ್ರಾಸ್ 4ನೇ ವಿಭಾಗ, 7ನೇ ಮುಖ್ಯ ರಸ್ತೆ, [illegible] ದಿಣ್ಣೆ, [illegible], ಬೆಂಗಳೂರು-560010. ಮೊ.9845560790. | Manipal Hospital, Old Airport Road, Kodihalli, Bengaluru-560017. | ಶ್ರೀ.ವಾಗೀಶಯ್ಯ ಮಠದ ಹಾವೇರಿ ಇವರು ಕೋವಿಡ್-19 ಚಿಕಿತ್ಸೆಗೆ ಮಣಿಪಾಲ್ ಆಸ್ಪತ್ರೆ ಹೆಚ್.ಎ.ಎಲ್ ಬೆಂಗಳೂರು ಇಲ್ಲಿ ಚಿಕಿತ್ಸೆ ಪಡೆದು ಕೋವಿಡ್-19 ಸಂದರ್ಭದಲ್ಲಿ ಮಣಿಪಾಲ್ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. | ವಿಚಾರಣೆ ಮಾಡಲಾಗಿ ಸರ್ಕಾರದ ನಿಯಮದ ಪ್ರಕಾರ ದಿನಕ್ಕೆ 25 ಸಾವಿರದಂತೆ 4 ಲಕ್ಷವಾಗಿರುತ್ತದೆ. ಹೆಚ್ಚುವರಿಯಾಗಿ 2 ಲಕ್ಷದ 80 ಸಾವಿರದ 99 ರೂಪಾಯಿಗಳನ್ನು ಹಿಂದಿರುಗಿಸಲು ಆದೇಶಿಸಿದೆ. | ರೂ.2,80,099/- |
| 9 | Mrs. Rashida Rafique Laljee and C/o Atul A Panjwani (Brother of Rashida R laljee) Maratha halli, Bengaluru-560037. Rashida.Laljee@gmail.com | 1.Rajalkshmi Multispeciality Hosptial No.76-1-1, V.R Layout, 1st Phase, J.P.Nagar, Bengaluru-560038.<br><br>2.Vikram Hospital, Millers Road, Bengaluru-560052. | ಶ್ರೀ.ರಫೀಕ್ ಸುಲ್ತಾನ್ ಅಲಿ ಲಾಲ್‌ಜಿ ಎಂಬುವವರ ದೂರಿನ ವಿಚಾರಣೆ ನಡೆಸುವ ಬಗ್ಗೆ ಸುವರ್ಣ ಆರೋಗ್ಯ ಟ್ರಸ್ಟ್ ರವರು ಆಸ್ಪತ್ರೆಗೆ ಭೇಟಿ ನೀಡಿರುವ ಬಗ್ಗೆ | ರಾಜಲಕ್ಷ್ಮಿ ಆಸ್ಪತ್ರೆಯವರು ಡಿಸ್‌ಚಾರ್ಜ್ ಸಮ್ಮರಿ ನೀಡದಿರುವುದು ಪೇಷಂಟ್ ಸಾವಿಗೆ ಕಾರಣವಾಗಿರಬಹುದು ಎಂಬುದನ್ನು ಪರಿಶೀಲಿಸದೇ ಪೇಷಂಟ್ ಪಾವತಿಸಿರುವ ಒಟ್ಟು ಮೊತ್ತವನ್ನು ಹಿಂದಿರುಗಿಸಲು ಆದೇಶಿಸಿದೆ. ವಿಕ್ರಮ್ ಆಸ್ಪತ್ರೆಯವರು ಹೆಚ್ಚುವರಿ ಪಡೆದಿದ್ದಲ್ಲಿ ಪರಿಶೀಲಿಸಿ ಹೆಚ್ಚುವರಿ ಮೊತ್ತವನ್ನು ಹಿಂದಿರುಗಿಸಲು ಆದೇಶಿಸಿದೆ. ಮಣಿಪಾಲ್ ಆಸ್ಪತ್ರೆ, ರೂ.160,286/- ರಾಜಲಕ್ಷ್ಮಿ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆ | ರೂ.3,50,000/-<br><br>ರೂ.1,60,000/- |

Scanned with OKEN Scanner

| | | | | | |
|---|---|---|---|---|---|
| | | | | | ರೋಗಿಗೆ/ರೋಗಿಯ ೨ ಸಂಬಂಧಿಕರಿಗೆ ಸಲ್ಲಿಸಿರುತ್ತಾರೆ) |

District Health & FW Office
Bangalore Urban Dist[illegible]
Old T.B. Hosp[illegible] Compound,
[illegible] Road, Indiranagar, Bangalore-56003[illegible]